ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಸ್ಪೇಷಲ್ ಕೇಸ್ **:475/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಹೇಲ್ ಖಾನ್ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಕಲಂದರ್ ಖಾನ್ | **10.01.2024** |
| ವಯಸ್ಸು | : | 42 ವರ್ಷ | |
| ವೃತ್ತಿ | : | ಪಂಚರ್ ಅಂಗಡಿ | ಪಿ.ಡಬ್ಲೂ: 2 |
| ವಾಸಸ್ಥಳ | : | ರಾಜೀವನಗರ, ಮೈಸೂರು | ಸಿ.ಡಬ್ಲೂ: 2 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇಲ್ಲ. ಪ್ರಾಸಾ 1 ರವರ ಪರಿಚಯ ಇಲ್ಲ. ಈಗ 3 ವರ್ಷಗಳ ಹಿಂದೆ ಸಿಸಿಬಿ ಠಾಣೆಗೆ ಲಾರಿ ಬಿಡಿಸಿಕೊಳ್ಳಲು ನಾನು ಹೋದಾಗ ಪೊಲೀಸರು ನನ್ನ ಸಹಿ ಪಡೆದಿದ್ದಾರೆ. ಈಗ ನನಗೆ ತೋರಿಸಿದ ನೋಟೀಸ್ ನ ಮೇಲೆ ನನ್ನ ಸಹಿ ಇದೆ. ನೋಟೀಸ್ ನ್ನು ನಿಪಿ.-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.- 3 (ಎ) ಎಂದು ಗುರುತಿಸಲಾಯಿತು. ನಿಪಿ. 3 ರಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನೊಂದಿಗೆ ನಿಪಿ. 3 ಕ್ಕೆ ಚಾಸಾ- 3 ರವರು ಸಹಿ ಮಾಡಿದ್ದಾರೆ. ನಿಪಿ. 2 ರ ಮೇಲಿರುವ ಸಹಿ ನನ್ನದೆ ಆಗಿದೆ. ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ನಿಪಿ. 2 ರಲ್ಲಿ ಬರೆದ ವಿಷಯಗಳ ಬಗ್ಗೆ ಮಾಹಿತಿ ಇಲ್ಲ. ಆ ಎರಡೂ ಸಹಿಗಳನ್ನು ನಾನು ಠಾಣೆಯಲ್ಲಿಯೇ ಮಾಡಿದ್ದೇನೆ. ಯಾವ ದಿನಾಂಕದಂದು ಹಾಗೂ ಯಾವ ಸಮಯದಲ್ಲಿ ಆ ಸಹಿಗಳನ್ನು ಮಾಡಿದ್ದೇನೆ ಎಂದು ನೆನಪಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಆ ದಿನ ಜಪ್ತು ಮಾಡಿಕೊಂಡಿಲ್ಲ. ಮು. ಮಾ. 1 ಕ್ಕೆ ಹಚ್ಚಿದ ಚೀಟಿಯ ಮೇಲೆ ನನ್ನ ಸಹಿ ಇದೆ. ಮು. ಮಾ. 1 ನ್ನು ಪೊಲೀಸರು ಯಾವಾಗ ವಶಪಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ

ಮೊದಲು ನಾನು ಆರೋಪಿತರನ್ನು ನೋಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2. ದಿಃ 02.10.2020 ರಂದು ಚಾಸಾ-18 ರವರು ನನಗೂ ಹಾಗೂ ಚಾಸಾ- 3 ರವರನ್ನು ಬರಮಾಡಿಕೊಂಡರು ಎಂದರೆ ನಿಜ. ಚಾಸಾ- 18 ರವರು ತಮಗೆ 1 ನೇ ಆರೋಪಿಯ ಅಂಗಡಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ತಿಳಿಸಿ ನಿಪಿ. 3 ನೋಟೀಸ್ ಕೊಟ್ಟರು ಎಂದರೆ ಸರಿಯಲ್ಲ. ಚಾಸಾ- 18 ರವರು ಫ್ರಾಸಾ 1 , ನನ್ನನ್ನು ಹಾಗೂ ಚಾಸಾ-3, 12, 13,14 ರವರನ್ನು ಕರೆದುಕೊಂಡು ದಾಳಿಗೆ ಬೇಕಾಗುವ ಪರಿಕರಗಳೊಂದಿಗೆ ಇಲಾಖಾ ವಾಹನದಲ್ಲಿ ಮಧ್ಯಾಹ್ನ 12 ಗಂಟೆಗೆ ಸ್ಥಳಕ್ಕೆ ಹೋದರು ಎಂದರೆ ಸರಿಯಲ್ಲ.

3. ನಾವು ಸ್ಥಳಕ್ಕೆ ಹೋದಾಗ ಅಂಗಡಿಯಲ್ಲಿ 1 ನೇ ಆರೋಪಿ ಇದ್ದ ಎಂದರೆ ಸರಿಯಲ್ಲ. ಪೊಲೀಸರು ಹತ್ತಿರ ಹೋಗುತ್ತಿದ್ದಂತೆ ಆ ವ್ಯಕ್ತಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಪೊಲೀಸರು ಸುತ್ತುವರೆದು ಅವನನ್ನು ವಶಕ್ಕೆ ಪಡೆದರು ಎಂದರೆ ಗೊತ್ತಿಲ್ಲ. ನನ್ನ ಹಾಗೂ ಚಾಸಾ- 3 ರವರ ಸಮಕ್ಷಮದಲ್ಲಿ ಅವರು ಪರಸ್ಪರ ಅಂಗಶೋಧನೆ ಮಾಡಿಕೊಂಡು, ಅಂಗಡಿಯ ಒಳಗೆ ಹೋಗಿ ಪರೀಕ್ಷಿಸಲಾಗಿ ಅಂಗಡಿಯ ಸಜ್ಜಾದ ಮೇಲೆ ಒಂದು ಪಾರದರ್ಶಕ ಪ್ಲಾಸ್ಟಿಕ್ ಕವರ್

ಇತ್ತು , ಅದರಲ್ಲಿ ಗಾಂಜಾ ಅಂದರೆ ಹೂವು , ಕಾಂಡ , ಬೀಜ, ಸೊಪ್ಪಿನಿಂದ ಕೂಡಿದ್ದಾಗಿತ್ತು ಎಂದರೆ ಸರಿಯಲ್ಲ. ಗಾಂಜಾ ಎಂದು ಖಚಿತಪಡಿಸಿಕೊಂಡ ನಂತರ ನಮ್ಮ ಸಮಕ್ಷಮ ಚಾಸಾ- 18 ರವರು ತೂಕ ಮಾಡಲಾಗಿ 1 ಕೆಜಿ 983 ಗ್ರಾಂ ಇತ್ತು ಎಂದರೆ ಸರಿಯಲ್ಲ. ದೊರೆತ ಗಾಂಜಾವನ್ನು ಬಿಳಿಯ ಬಟ್ಟೆಯಲ್ಲಿ ಹಾಕಿ ಹೊಲೆ ಎ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ ನಾವು ಹಾಗೂ ಚಾಸಾ- 18 , ಆರೋಪಿ ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು ಎಂದರೆ ಸರಿಯಲ್ಲ.

4. ಚಾಸಾ- 18 ರವರ ಆದೇಶದ ಮೆರೆಗೆ ನ್ಯಾಯಾಲಯ ಮುಂದಿರುವ 1 ನೇ ಆರೋಪಿ ತನ್ನ ಜೇಬಿನಿಂದ ರೂ. 2,200/- ಹೊರಗೆ ಇಟ್ಟ ಎಂದರೆ ಸರಿಯಲ್ಲ. ಅದನ್ನು ತನಿಖಾಧಿಕಾರಿ ಪ್ಲಾಸ್ಟಿಕ್ ಕವರ್ ಗೆ ಹಾಕಿ ಬಿಳಿ ಬಟ್ಟೆಯಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ ನಮ್ಮ ಹಾಗೂ ಚಾಸಾ- 18 , ಆರೋಪಿ ಸಹಿ ಮಾಡಿದ ಚೀಟಿಗಳನ್ನು ಅಂಟಿಸಲಾಯಿತು ಎಂದರೆ ಸರಿಯಲ್ಲ.

5. 1 ನೇ ಆರೋಪಿಗೆ ಗಾಂಜಾದ ಬಗ್ಗೆ ವಿಚಾರಿಸಲಾಗಿ 2 ಮತ್ತು 3 ನೇ ಆರೋಪಿತರಿಂದ ಗಾಂಜಾ ತೆಗೆದುಕೊಂಡು ಮಾರುವುದಾಗಿ ತಿಳಿಸಿದ ಎಂದರೆ ಸರಿಯಲ್ಲ. 1 ನೇ ಆರೋಪಿ 2 ಮತ್ತು 3 ನೇ ಆರೋಪಿತರ ಮನೆಯನ್ನು ತೋರಿಸುವುದಾಗಿ ಹಾಗೂ ಅವರ ಮನೆಯಲ್ಲಿ ಗಾಂಜಾವನ್ನು ಸೇಖರಿಸಿರುವುದಾಗಿ ತಿಳಿಸಿದ ಎಂದರೆ ಸರಿಯಲ್ಲ. ಆ ಪ್ರಕಾರ 1 ನೇ ಆರೋಪಿ ತೋರಿಸಿದ ಮಾರ್ಗದಲ್ಲಿ ಅಧಿಕಾರಿಗಳು ಸರ್ಕಾರಿ ವಾಹನದಲ್ಲಿ , ನಮ್ಮೆಲ್ಲರನ್ನು ರಾಜೀವನಗರದ , 2 ನೇ ಹಂತ , ಮನೆ ನಂ. 2100 ಹತ್ತಿರ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಒಳಗೆ ಹೋಗಿ 1 ನೇ ಆರೋಪಿ ಸೋಪಾದ ಮೇಲೆ ಕುಳಿತಂತಹ ಇಬ್ಬರು ವ್ಯಕ್ತಿಗಳನ್ನು 2 ಮತ್ತು 3 ನೇ ಆರೋಪಿತರು ಎಂದು ಹೇಳಿದ ಎಂದರೆ ಸರಿಯಲ್ಲ.

ಅವರು ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರಾಗಿದ್ದಾರೆ ಎಂದರೆ ಗೊತ್ತಿಲ್ಲ. ಚಾಸಾ- 18 ರವರು 2 ಮತ್ತು 3 ನೇ ಆರೋಪಿತರನ್ನು ವಶಕ್ಕೆ ಪಡೆದು ಮನೆಯನ್ನು ಪರಿಶೀಲಿಸುವಂತೆ ತಿಳಿಸಿದರು ಎಂದರೆ ಸರಿಯಲ್ಲ. ಆ ಮನೆಯಲ್ಲಿ 2 ಕೋಣೆಗಳು ಇದ್ದು, ಒಂದು ಕೋಣೆಯ ಸಜ್ಜಾದ ಮೇಲೆ ಜುವಾರಿ ಚೀಲದಲ್ಲಿ ಕಟ್ಟಿರುವ ಒಂದು ಬಂಡಲ್ ಇದ್ದು , ಅದನ್ನು ಪರಿಶೀಲಿಸಿದಾಗ ಅದರಲ್ಲಿ ಗಾಂಜಾ ಇತ್ತು ಎಂದರೆ ಸರಿಯಲ್ಲ. ಚಾಸಾ- 18 ರವರು ಅದನ್ನು ಪಂಚರ ಸಮಕ್ಷಮ ತೂಕ ಮಾಡಲಾಗಿ ಅದು 3 ಕೆಜಿ 105 ಗ್ರಾಂ ಇತ್ತು ಎಂದರೆ ಸರಿಯಲ್ಲ. ಅದೇ ಸಜ್ಜಾದ ಮೇಲೆ ದಿನಪತ್ರಿಕೆಯಲ್ಲಿ ಸುತ್ತಿದ ಇನ್ನೊಂದು ಬಂಡಲ್ ಇದ್ದು ಅದನ್ನು ನೋಡಲಾಗಿ ಅದರಲ್ಲಿಯೂ ಸಹ ಗಾಂಜಾ ಇದ್ದದ್ದು ಕಂಡು ಬಂತು ಎಂದರೆ ಸರಿಯಲ್ಲ. ಚಾಸಾ- 18 ರವರು ಅದನ್ನು ನಮ್ಮ ಸಮಕ್ಷಮ ತೂಕ ಮಾಡಲಾಗಿ ಅದು 5 ಕೆಜಿ 44 ಗ್ರಾಂ ಇತ್ತು ಎಂದರೆ ಸರಿಯಲ್ಲ. ಅವೆಲ್ಲವುಗಳನ್ನು ಬಿಳಿ ಬಟ್ಟೆಯಲ್ಲಿ ಹೊಲೆದು ಎ ಎಂಬ ಅಕ್ಷರದಿಂದ ಸೀಲ್ ಮಾಡಿ ಚಾಸಾ- 18 ರವರು ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ಜುವಾರಿ ಸಿಮೆಂಟ್ ಚೀಲ್ ವನ್ನು ಪ್ರತ್ಯೇಕ ಚೀಲದಲ್ಲಿ ಹಾಕಿ ಸೀಲ್ ಮಾಡಿ ವಶಕ್ಕೆ ಪಡೆದುಕೊಳ್ಳಲಾಯಿತು ಎಂದರೆ ಸರಿಯಲ್ಲ. .

6. ಮಧ್ಯಾಹ್ನ 2.15 ರಿಂದ 4.45 ಗಂಟೆಯವರೆಗೆ ಪಂಚನಾಮೆ ಮಾಡಿ ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಜಪ್ತು ಮಾಡಿಕೊಳ್ಳಲಾಯಿತು ಎಂದರೆ ಸರಿಯಲ್ಲ.

7.ಆ ದಿನ 500 ರೂ ಮುಖಬೆಲೆಯ 3 ನೋಟುಗಳು , 200 ರೂ ಮುಖಬೆಲೆಯ 2, 100 ರೂ ಮುಖಬೆಲೆಯ 3 ನೋಟುಗಳನ್ನು 1 ನೇ ಆರೋಪಿ ಹಾಜರುಪಡಿಸಿದ್ದ ಎಂದರೆ ಸರಿಯಲ್ಲ.

8. ಚಾಸಾ- 18 ರವರು ನಮ್ಮೆಲ್ಲರೊಂದಿಗೆ ವಶಕ್ಕೆ ಪಡೆದ 3 ಜನ

ಆರೋಪಿತರೊಂದಿಗೆ ಹಾಗೂ ಜಫ್ತಾದ ವಸ್ತುಗಳೊಂದಿಗೆ ಠಾಣೆಗೆ ಬಂದರು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಈಗ ನನಗೆ ಓದಿ ಹೇಳಿದಂತೆ ನಿಪಿ. 4 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕರೆದಾಗ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯುತ್ತೇನೆ ಮುಚ್ಚಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಮುಚ್ಚಳಿಕೆ ಪತ್ರವನ್ನು ನಿಪಿ.– 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.–5 (ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರಃ ಇಲ್ಲ**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

10.01.2024
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.